ವಿಜಯವಾಣಿ
ಕನ್ನಡಿಗರ ಧ್ವನಿ

# ಗಗನಕ್ಕೆ ಏಣಿ: ಲಂಡನ್‌ಗೆ ಕನ್ನಡದ ಹುಡುಗ

■ ಎಂ.ಎಸ್ ಸಿದ್ದೇಶ

**ಬೆಂಗಳೂರು:** ಜೀವನವೇ ಅನಿರೀಕ್ಷಿತ ತಿರುವುಗಳ ಯಾನ. ಜೀವನದ ದಿಕ್ಕನ್ನೇ ಬದಲಿಸಬಲ್ಲ ಇಂಥ ಅನಿರೀಕ್ಷಿತ ಘಟನೆಯೊಂದು ಕರ್ನಾಟಕದ ಯುವ ಈಜುಗಾರ ಗಗನ್ ಎಪಿ ಉಲ್ಲಾಳ್‌ಮಠ್ ವೃತ್ತಿಬದುಕಿನಲ್ಲಿ ಸಂತಸದ ದೀಪ ಹಚ್ಚಿದೆ. ಬೆಂಗಳೂರಿನ ಹುಡುಗ ಗಗನ್ ಲಂಡನ್ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಲಿರುವ ಏಕೈಕ ಈಜುಗಾರ. 1500 ಮೀ ಫ್ರೀಸ್ಟೈಲ್ ಈಜು ಸ್ಪರ್ಧೆಯಲ್ಲಿ ಗಗನ್ ಸ್ಪರ್ಧಿಸಲಿದ್ದಾರೆ. ಅಂತಾರಾಷ್ಟ್ರೀಯ ಈಜು ಒಕ್ಕೂಟ (ಫಿನಾ) ಸಾರ್ವತ್ರಿಕತ್ವ (ಯುನಿವರ್ಸಾಲಿಟಿ) ಕೋಟಾದಡಿ ಅವರಿಗೆ ಒಲಿಂಪಿಕ್ಸ್ ಬಾಗಿಲು ತೆರೆದಿದೆ. ಇಂಥ ಸಾಧ್ಯತೆ ನನ್ನ ಕನಸಿನಲ್ಲೂ ಸುಳಿದಿರಲಿಲ್ಲ ಎನ್ನುವುದು ಇದಕ್ಕೆ ಗಗನ್ ಪ್ರತಿಕ್ರಿಯೆ. ಒಲಿಂಪಿಕ್ಸ್‌ಗೆ ನಿಗದಿಗೊಳಿಸಲಾಗಿದ್ದ 'ಬಿ' ದರ್ಜೆ ಮಾನದಂಡವನ್ನು ಪಾಸು ಮಾಡಿದ್ದ ವೀರಧವಳ್ ಖಾಡೆ, ಸಂದೀಪ್ ಸೆಜ್ವಾಲ್, ಆರನ್ ಡಿಸೋಜಾ ಹಾಗೂ ಸೌರಭ್ ಸಂಗ್ವೇಕರ್ ಲಂಡನ್ ಟಿಕೆಟ್‌ನ ನಿರೀಕ್ಷೆಯಲ್ಲಿದ್ದರಾದರೂ, ಫಿನಾ ಕೋಟಾ ಜಾಗದಲ್ಲಿ ಗಗನ್‌ಗೆ ಅವಕಾಶ ಕಲ್ಪಿಸಿರುವುದು ಸಂಭ್ರಮಾಶ್ಚರ್ಯಕ್ಕೆ ಕಾರಣವಾಗಿದೆ. ಇಂಥ ಅಪೂರ್ವ ಅವಕಾಶ ಲಭ್ಯವಾದ ಇಪ್ಪತ್ನಾಲ್ಕು ಗಂಟೆಗಳ ಬಳಿಕವೂ ಅದೇ ಗುಂಗಿನಲ್ಲಿದ್ದ ಗಗನ್ 'ವಿಜಯವಾಣಿ' ಸಂದರ್ಶನದಲ್ಲಿ ಮಾತನಾಡಿದರು.

## ಯಾರೀ ಹುಡುಗ?

**ಸರ್ಕಾರಿ ಉದ್ಯೋಗಿ ಎ ಪುಟ್ಟಸ್ವಾಮಿ ಹಾಗೂ ಗೃಹಿಣಿ ಎಂಎಸ್ ಸಂಧ್ಯಾ ಪುತ್ರನಾದ ಗಗನ್, ಜೈನ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್‌ನಲ್ಲಿ ಬಿಬಿಎಂ 3ನೇ ವರ್ಷದ ಅಂತಿಮ ಪರೀಕ್ಷೆಯನ್ನು ಶುಕ್ರವಾರವಷ್ಟೆ ಬರೆದಿದ್ದಾರೆ. ಬೆಂಗಳೂರಿನವರೇ ಆದ ಗಗನ್‌ಗೆ ಈಗ 20 ವರ್ಷ.**



ಲಂಡನ್ ಒಲಿಂಪಿಕ್ಸ್

19 ದಿನ ಗಣನೆ

- **ಒಲಿಂಪಿಕ್ಸ್‌ನಲ್ಲಿ ನೀವು ಏಕೈಕ ಭಾರತೀಯ ಈಜುಗಾರ?**
ನಿರೀಕ್ಷೆಯನ್ನೇ ಮಾಡಿರಲಿಲ್ಲ. ತುಂಬಾ ಸಂತೋಷವಾಗಿದೆ. ಈ ಅವಕಾಶಕ್ಕಾಗಿ ಫಿನಾ ಮತ್ತು ಭಾರತೀಯ ಈಜು ಒಕ್ಕೂಟಕ್ಕೆ ಧನ್ಯವಾದ. ಉತ್ತಮ ಪ್ರದರ್ಶನ ನೀಡುವ ಮೂಲಕ ರಾಜ್ಯಕ್ಕೆ ಮತ್ತು ದೇಶಕ್ಕೆ ಒಳ್ಳೆಯ ಹೆಸರು ತರುತ್ತೇನೆ.
- **ನಿಮ್ಮ ಸಾಧನೆಯ ಹಾದಿಯಲ್ಲಿ ರಾಜ್ಯ ಸರ್ಕಾರದ ಪ್ರೋತ್ಸಾಹ ಮತ್ತು ಬೆಂಬಲ ಹೇಗಿದೆ?**
2011ರ ಜೂನ್‌ನಲ್ಲಿ ಅಂದಿನ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ 5 ಲಕ್ಷ ರೂ.ಗಳನ್ನು ನನ್ನ ತರಬೇತಿಗಾಗಿ ನೀಡಿದ್ದನ್ನು ಬಿಟ್ಟರೆ ಮತ್ತೇನು ಇಲ್ಲ.
- **ನೀವು ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವ ಅವಕಾಶದ ಸುದ್ದಿ ಬಹಿರಂಗವಾದ ತಕ್ಷಣ ಸರ್ಕಾರ ಮತ್ತು ನಿಮ್ಮ ನಡುವೆ ಸಂವಹನ ನಡೆದಿದೆಯೇ?**
ಇಲ್ಲ. ಇದುವರೆಗೂ ನನ್ನನ್ನು ಯಾರೂ ಸಂಪರ್ಕಿಸಿಲ್ಲ.
- **ಫಿನಾ ನಿಮಗೆ ಅವಕಾಶ ಮಾಡಿಕೊಟ್ಟದ್ದಕ್ಕೆ ನಿಮ್ಮ ತಂದೆ-ತಾಯಿಯ ಪ್ರತಿಕ್ರಿಯೆ ಹೇಗಿತ್ತು?**
ಸಂಭ್ರಮಾಚರಣೆಯಲ್ಲಿ ತೊಡಗಿದ್ದಾರೆ. ಬಹಳ ಖುಷಿ ಪಟ್ಟರು.
- **ಒಲಿಂಪಿಕ್ಸ್‌ನಲ್ಲಿ ಈಜು ಸ್ಪರ್ಧೆ ಜು.28ರಿಂದ ಆ.4ರ ನಡುವೆ ನಡೆಯಲಿರುವುದರಿಂದ ನಿಮ್ಮ ಲಂಡನ್ ಪ್ರಯಾಣ ಯಾವಾಗ?**
ಆ ವಿವರವನ್ನು ಇನ್ನಷ್ಟೇ ಪಡೆದುಕೊಳ್ಳಬೇಕು.
- **ನಿಮ್ಮಿಂದ ಪದಕದ ನಿರೀಕ್ಷೆ ಇಟ್ಟುಕೊಳ್ಳಬಹುದೇ?**
ಸಾಧ್ಯತೆ ಕ್ಷೀಣ
- **ಹಾಗಾದರೇ ಭಾರತ ಈಜು ಸ್ಪರ್ಧೆಯಲ್ಲಿ ಪದಕ ಗಳಿಸಲು ಇನ್ನೂ ಎಷ್ಟು ವರ್ಷ ಬೇಕಾಗಬಹುದು?**
ಇಷ್ಟೇ ವರ್ಷದಲ್ಲಿ ಒಲಿಂಪಿಕ್ಸ್‌ನಲ್ಲಿ ಈಜಿನಲ್ಲಿ ರಾಷ್ಟ್ರ ಪದಕ ಸಾಧನೆ ಮಾಡುತ್ತದೆ ಎಂದು ನಿಖರವಾಗಿ ಹೇಳಲಾಗದು. ಈಜು ಪಟುಗಳ ದೇಹದಾರ್ಢ್ಯತೆಯಲ್ಲಿ ಬದಲಾವಣೆಯಾದರೆ ಪದಕ ಗೆಲ್ಲುವ ಸಾಧ್ಯತೆ ಹೆಚ್ಚುತ್ತದೆ ಎಂಬುದು ನನ್ನ ಅನಿಸಿಕೆ.
- **ಒಲಿಂಪಿಕ್ಸ್‌ಗೆ ಇನ್ನು ಇಪ್ಪತ್ತು ದಿನಗಳೂ ಇಲ್ಲ. ಇಲ್ಲ. ನಿಮ್ಮ ಅಭ್ಯಾಸ ಹೇಗೆ ನಡೆಯುತ್ತಿದೆ?**
ಪ್ರತಿದಿನ ಬೆಳಗ್ಗೆ 5ರಿಂದ 8 ಮತ್ತು ಸಂಜೆ 5ರಿಂದ 8 ಗಂಟೆಯ ತನಕ ಅಭ್ಯಾಸ ನಡೆಸುತ್ತಿದ್ದೇನೆ.
- **ಈಜಿನ ಮೇಲೆ ಆಸಕ್ತಿ ಹೇಗೆ ಶುರುವಾಯಿತು?**
ಅಕ್ಕಂದಿರಾದ ಕಾವ್ಯ ಮತ್ತು ತೇಜಸ್ವಿನಿ ಈಜಲು ಹೋಗುತ್ತಿದ್ದರು. ಅವರಿಂದ ಪ್ರೇರಿತನಾಗಿ 5ನೇ ವಯಸ್ಸಿನಲ್ಲೇ ನಾನು ಈಜಲು ಆರಂಭಿಸಿದೆ. ಸುಮಾರು 15 ವರ್ಷದ ಫಲ, ಇಂದು ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಅವಕಾಶ.
- **ಮುಂದಿನ ಗುರಿ?**
2016ರಲ್ಲಿ ಬ್ರೆಜಿಲ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಅರ್ಹತೆ ಪಡೆಯುವುದು.
- **ಭಾರತದ ಖಾಡೆ, ಸೆಜ್ವಾಲ್, ಆರನ್ ಡಿಸೋಜಾ ಹಾಗೂ ಸಂಗ್ವೇಕರ್ ಒಲಿಂಪಿಕ್ಸ್ 'ಬಿ' ಅರ್ಹತೆ ಗಿಟ್ಟಿಸಿದರೂ ಅವಕಾಶ ವಂಚಿತರಾಗಿದ್ದಾರೆ, ಆ ಬಗ್ಗೆ?**
ಪ್ರತಿಕ್ರಿಯೆ ನೀಡಲು ಬಯಸುವುದಿಲ್ಲ.



ಖಾಡೆ, ಸಂದೀಪ್, ಡಿಸೋಜಾ, ಸೌರಭ್ ಹಾಗೂ ಗಗನ್ ಎಲ್ಲರೂ ನನ್ನ ಮಾರ್ಗದರ್ಶನದಲ್ಲೇ ಬೆಳೆಯುತ್ತಿರುವ ಪ್ರತಿಭೆಗಳು. ಫಿನಾ ನೀತಿ-ನಿರ್ಧಾರಗಳನ್ನು ಯಾರು ಪ್ರಶ್ನಿಸಲಾಗದು. ಗಗನ್‌ಗೆ ಒಲಿಂಪಿಕ್ಸ್ ಅವಕಾಶ ದೊರೆತಿದ್ದರಿಂದ ಸಂತೋಷವಾಗಿದೆ.

**-ಪ್ರದೀಪ್ ಕುಮಾರ್,** ಗಗನ್ ಕೋಚ್

■ ಜಾರ್ಖಂಡ್‌ನಲ್ಲಿ ನಡೆದ 34ನೇ ರಾಷ್ಟ್ರೀಯ ಕ್ರೀಡಾಕೂಟದ ಈಜು ಸ್ಪರ್ಧೆಗಳಲ್ಲಿ ಗಗನ್ 8 ಪದಕ ಗೆದ್ದಿದ್ದರು.

## ಗಗನ್‌ಗೆ ಚಾನ್ಸ್ ಲಭಿಸಿದ್ದು ಹೇಗೆ?

ಇತ್ತೀಚೆಗೆ ಫಿನಾ ಬಿಡುಗಡೆ ಮಾಡಿದ್ದ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಈಜುಗಾರರ ಮೊದಲ ಪಟ್ಟಿಯಲ್ಲಿ ಭಾರತದ ಯಾವುದೇ ಸ್ಪರ್ಧಿಗಳು ಸ್ಥಾನ ಪಡೆದಿರಲಿಲ್ಲ. ಹಾಗಾಗಿ ದೇಶಕ್ಕೆ ಪ್ರಾತಿನಿಧ್ಯ ಸ್ಥಾನ ನೀಡುವಂತೆ ಅಂತಾರಾಷ್ಟ್ರೀಯ ಒಕ್ಕೂಟಕ್ಕೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಗಗನ್‌ಗೆ ಅವಕಾಶ ದೊರೆತಿದೆ ಎಂದು ಭಾರತೀಯ ಈಜು ಒಕ್ಕೂಟ ತಿಳಿಸಿದೆ. ಫಿನಾ ನಿಯಮಗಳ ಪ್ರಕಾರ ವಿವಿಧ ಅಂತಾರಾಷ್ಟ್ರೀಯ ಈಜು ಕೂಟಗಳಲ್ಲಿ ಒಲಿಂಪಿಕ್ಸ್ ಅರ್ಹತಾ ಸಮಯ (ಒಲಿಂಪಿಕ್ಸ್ ಕ್ವಾಲಿಫೈಯಿಂಗ್ ಟೈಮ್, ಇದು ಎ ದರ್ಜೆ) ಸಾಧಿಸುವ ಈಜುಗಾರರು ಒಲಿಂಪಿಕ್ಸ್‌ಗೆ ನೇರ ಪ್ರವೇಶ ಪಡೆಯುತ್ತಾರೆ. ಆದರೆ, ಒಲಿಂಪಿಕ್ಸ್ ಸೆಲೆಕ್ಷನ್ ಟೈಮ್ (ಒಲಿಂಪಿಕ್ಸ್ ಆಯ್ಕೆ ಸಮಯ, ಬಿ ದರ್ಜೆ) ಸಾಧಿಸುವ ಈಜುಗಾರರಿಗೆ ಒಲಿಂಪಿಕ್ಸ್ ಪ್ರವೇಶ ಖಾತ್ರಿ ಇರುವುದಿಲ್ಲ. ಅವರಲ್ಲಿ ಫಿನಾ ಆಯ್ಕೆ ಮಾಡುವ ಕೆಲವರು ಮಾತ್ರ ಅರ್ಹತಾ ಟಿಕೆಟ್ ಸಂಪಾದಿಸುತ್ತಾರೆ. ಭಾರತದ ಖಾಡೆ, ಸೆಜ್ವಾಲ್, ಆರನ್ ಮತ್ತು ಸಂಗ್ವೇಕರ್ ಬಿ ದರ್ಜೆ ಸಮಯ ಮಾತ್ರ ಸಾಧಿಸಿದ್ದರಿಂದ ಫಿನಾ ಆ ಪೈಕಿ ಯಾರನ್ನೂ ಆಯ್ಕೆ ಮಾಡಲಿಲ್ಲ. ಯುನಿವರ್ಸಾಲಿಟಿ ಕೋಟಾ ಸ್ಥಾನ ನಿರ್ಧರಿಸುವಾಗ ಫಿನಾ 'ಬಿ' ದರ್ಜೆ ಸಮಯ ಸಾಧಿಸುವ ಈಜುಗಾರನ್ನು ಪರಿಗಣಿಸುವುದಿಲ್ಲ. ಹಾಗಾಗಿ ಆ ನಾಲ್ವರ ಬದಲು ಗಗನ್‌ಗೆ ಲಂಡನ್ ಟಿಕೆಟ್ ಅದೃಷ್ಟ ಒಲಿದಿದೆ.